ಕವಿತೆ


ಆರತಿ ಎಚ್ ಎನ್




ಕಲೆ: ರೂಪಶ್ರೀ ಕಲ್ಲಿಗನೂರು



# ನೀನು ಬಿಟ್ಟು ಹೋದ ಮೇಲೆ...

ನೀನು ಬಿಟ್ಟು ಹೋದ ಮೇಲೆ
ನೀನಿರದ ಘಳಿಗೆಗಳೆಲ್ಲಾ ಪ್ರಶ್ನೆಗಳಾಗಿ,
ಅರ್ಥವಿರದ ಆಕರ್ಷಕ
ಟಿಕ್‌ಟಾಕ್ ಗಳಂತೆ,
ಒಬ್ಬರಿಗೊಬ್ಬರು ಅಂಟಿಕೊಂಡ
ಸ್ಟೇಟಸ್‌ಗಳಾಗಿ,
ನನ್ನ ಗಂಟೆ ದಿನಗಳನ್ನು
ಜಗಿದು ಸಿಗಿದು ನುಂಗಿ ಹಾಕುತ್ತಿವೆ.

"ನಖಶಿಖಾಂತ" ಎನ್ನುವುದು ಉರಿವ ಸಿಟ್ಟು
ಮಾತ್ರವಲ್ಲ, ಮಡುಗಟ್ಟಿದ
ದುಃಖವೂ,
ಎಂದು ತಿಳಿಯಲು
ರ್‍ಯಾಪಿಡಿಕ್ಸ್ ಕ್ಲಾಸಿಗೆ ಹೋಗಬೇಕಾ?
ಗೂಗಲ್ ಮ್ಯಾಪ್ ನೆಚ್ಚಿಕೊಂಡ ಯಾರೂ
ಹೇಳುತ್ತಿಲ್ಲ.

ಇಷ್ಟರ ನಡುವೆ,
ಮ್ಯಾನರ್ಸ್ ಕಲಿಯದ ಕಣ್ಣೀರು
ಎಲ್ಲೆಂದರಲ್ಲಿ ಪ್ರಕಟವಾಗುತ್ತಾ
ಕೆನ್ನೆ ಸವರುತ್ತಿದೆ,
ಒರೆಸುವ ಬೆರಳು ತುಟಿಗಳಿಲ್ಲದೆ.
ಬೈದರೆ, ರಚ್ಚೆ ಹಿಡಿದು
ಕಣ್ಣಲ್ಲೇ ಕಾಡಿಗೆಯಂತೆ ಚಕ್ಕಂಬಕ್ಕಳ ಕೂರುತ್ತದೆ
ಅತ್ತದ್ದೇ ಗೊತ್ತಾಗದಂತೆ.

ನಕ್ಷತ್ರವಾದರೂ ಸ್ವಕ್ಷೇತ್ರದಲ್ಲಿರಬೇಕು
ಎನ್ನುವವರನು,
ಅಂಗುಲ ಬಿಡದೆ
ಕಾಡುವವರನು,
ಕಂಡು ಮೋಹಿಸುವ ಎದೆಗೆ
ಯಾವ ಬ್ರಾ ತೊಡಿಸಿದರೆ,
ಕಾಲರ್ ಬಿಗಿದ ನಾಯಿಯಂತೆ ಕಾಂಪೌಂಡ್
ಒಳಗೆ
ಹೇಳಿದಂತೆ ಕೇಳಿಕೊಂಡು ಬಿದ್ದಿರಬಹುದು?!

ನೋಟ, ಬೇಟ, ಕೂಟಗಳೆಲ್ಲಾ ಬೀಟ್ ಗುಟ್ಟುವ
ಅಲರಾಂ ಸದ್ದಂತೆ,
ನಿನ್ನ ಹೆಸರಿಗೆ ಮಾತ್ರ
ಟೈಮ್ ಸೆಟ್ ಆಗಿದೆಯೋ ಏನೋ?
ಈಗಂತೂ ಕೆಲಸಕಾರ್ಯವಿಲ್ಲದೇ
ಆರ್ಡರ್ ಗೆ ಕಾಯುವ ಸ್ವಿಗ್ಗಿ, ಡಂಝೊ
ಏಜೆಂಟರಂತೆ ನಿಂತಲ್ಲೇ ಯಾಕೋ
ಚಡಪಡಿಸುತ್ತಿವೆ...

'ನೀನಿಲ್ಲ' ಎನ್ನುವ
ಒಂದೇ ಸಾಲಿನ ಸುದ್ದಿಯನ್ನು
ನೂರೆಂಟು ಚಾನಲ್ಲು ಬೇರೆ ಬೇರೆ ಹೇಳಿದ ಹಾಗೆ,
ಅಧಿಕ ಪ್ರಸಂಗದಲ್ಲಿ
ಮೈ ತುಂಬಾ ಹಚ್ಚೆ ಹಾಕಿಸಿ,
ಈಗ ತೆಗೆಸಲಾಗದೇ
ಪೆಚ್ಚಾದ ಚಿತ್ರ,
ಯಾಕೋ ಕರ್ಫ್ಯೂ ಯಶಸ್ವಿಯಾದ
ನಗರದಂತಿದೆ...

